# ಅಡುಗೆ ಕೋಣೆಯಲ್ಲೇ ಓದು!



**ಕವಿತಾ ಬಿ.ವಿ.**

**ಕಲಾ ವಿಭಾಗ, ರಾಜ್ಯಕ್ಕೆ ಮೊದಲ ಸ್ಥಾನ (596 ಅಂಕ), ಕನ್ನಡ ಮಾಧ್ಯಮ, 'ಇಂದು ಸ್ವತಂತ್ರ ಪದವಿಪೂರ್ವ ಕಾಲೇಜು', ಕೊಟ್ಟೂರು, ಕೂಡ್ಲಿಗಿ ತಾಲ್ಲೂಕು**

ನಮ್ಮ ಕಾಲೇಜಿನಲ್ಲಿಯೇ ತೀವ್ರ ಪೈಪೋಟಿಯ ಸ್ಪರ್ಧೆ ಇರುತ್ತಿತ್ತು. ಗುರಿ ಮುಟ್ಟುವ ಭರವಸೆಯಂತೂ ನನಗೆ ಇತ್ತು. ನಮ್ಮ ಕಾಲೇಜಿನಲ್ಲಿ 12 ಪೂರ್ವಪರೀಕ್ಷೆಗಳನ್ನು ಮಾಡುತ್ತಿದ್ದರು. ಆ ಪರೀಕ್ಷೆಯಲ್ಲಿ ಒಂದೊಂದು ಅಂಕಗಳಿಗೂ ನಾವು ಹೋರಾಡುತ್ತಿದ್ದೆವು. ಸಾಮಾನ್ಯವಾಗಿ ನಾನು ಮೊದಲ ಇಲ್ಲವೇ ಎರಡನೇ ಸ್ಥಾನದಲ್ಲಿ ಬರುತ್ತಿದ್ದೆ. ಅದು ಓದುವ ಸ್ಪರ್ಧೆಯನ್ನು ಹೆಚ್ಚಿಸುತ್ತಿತ್ತು.

ಕೂಡ್ಲಿಗಿ ತಾಲ್ಲೂಕು ಚೌಡಾಪುರ ನಮ್ಮೂರು. ನಿತ್ಯ ಊರಿನಿಂದ ಓಡಾಡುತ್ತಿದ್ದೆ. ನಮ್ಮೂರಿಗೆ ಬೆಳಿಗ್ಗೆ 7.45ಕ್ಕೆ ಬಸ್ ಬರ್ತಿತ್ತು. ನಾನು ಬೆಳಿಗ್ಗೆ ನಾಲ್ಕಕ್ಕೆ ಎದ್ದು 6 ಗಂಟೆಯ ತನಕ ಓದುತ್ತಿದ್ದೆ. ಆಮೇಲೆ ಮನೆಯ ಕೆಲಸ ಮಾಡಿ ರೆಡಿಯಾಗಿ ಕಾಲೇಜಿಗೆ ಹೋಗುತ್ತಿದ್ದೆ. ಕಾಲೇಜು ಮುಗಿಸಿಕೊಂಡು ಸಂಜೆ 6ಕ್ಕೆ ಮನೆಗೆ ಬರುತ್ತಿದ್ದೆ. ಬಂದ ತಕ್ಷಣ ಮನೆಯಲ್ಲಿ ಕಸ–ಮುಸುರೆ ಕೆಲಸ ಮಾಡಬೇಕಿತ್ತು. ಅದೆಲ್ಲ ಮುಗಿಸಿದ ನಂತರ ರಾತ್ರಿ 11 ಗಂಟೆಯ ತನಕ ಓದುತ್ತಿದ್ದೆ.

ಅಮ್ಮ ಮನೆಯಲ್ಲೇ ಟೈಲರಿಂಗ್ ಕೆಲಸ ಮಾಡುತ್ತಾರೆ. ಹಾಗಾಗಿ, ಮನೆಗೆ ಬಂದು ಹೋಗುವವರು ಹೆಚ್ಚು. ಓದಲಿಕ್ಕೆಂದು ಮನೆಯಲ್ಲಿ ಪ್ರತ್ಯೇಕ ಕೋಣೆ ಇರಲಿಲ್ಲ. ನಾನು ಅಡುಗೆ ಮನೆಯಲ್ಲೇ ಕುಳಿತು ಓದುತ್ತಿದ್ದೆ. ಭಾನುವಾರ ಮತ್ತು ರಜೆಯ ದಿನಗಳಲ್ಲಿ ಪ್ರತ್ಯೇಕ ವೇಳಾಪಟ್ಟಿಯನ್ನು ಹಾಕಿಕೊಂಡು ಓದುತ್ತಿದ್ದೆ. ಕಾಲೇಜು 9.30ಕ್ಕೆ ಆರಂಭವಾಗುತ್ತಿತ್ತು. ನಾನು 8.30ಕ್ಕೆ ತಲುಪಿರುತ್ತಿದ್ದೆ. ಓದಲು ನನಗೆ ಅಲ್ಲೂ ಒಂದು ಗಂಟೆ ಸಿಗ್ತಿತ್ತು. ಓದಿನ ವಿಷಯದಲ್ಲಿ ನಮ್ಮ ಉಪನ್ಯಾಸಕರು ಸಾಕಷ್ಟು ಸಹಾಯ ಮಾಡುತ್ತಿದ್ದರು. ಗ್ರಂಥಾಲಯಕ್ಕೆ ಯಾವಾಗಾದರೂ ಒಮ್ಮೊಮ್ಮೆ ಹೋಗುತ್ತಿದ್ದೆ. ನಮ್ಮ ಮನೆಯಲ್ಲಿ ಟೀವಿ ಇರಲಿಲ್ಲ. ಮೊಬೈಲ್ ಮನೆಯಲ್ಲಿದ್ದರೂ ಹೆಚ್ಚು ಬಳಸುತ್ತಿರಲಿಲ್ಲ. ಬೇಸರ ಆದಾಗ ಮನೆ ಕೆಲಸವೇ ಮನರಂಜನೆಯ ರೂಪದಲ್ಲಿ ಒದಗುತ್ತಿತ್ತು.

ಅಧ್ಯಾಪಕರ ಪಾಠವನ್ನು ಗಮನವಿಟ್ಟು ಕೇಳಿದರೆ ಎಲ್ಲವೂ ಅರ್ಥವಾಗುತ್ತದೆ. ಓದಿದ ಮೇಲೆ ಆಗಾಗ ಪುನರಾವರ್ತನೆ ಮಾಡುತ್ತಿರಬೇಕು. ಯಾವುದಾದರೂ ವಿಷಯ ಗೊತ್ತಾಗಲಿಲ್ಲ ಎಂದರೆ ಅದನ್ನು ಅರ್ಥಮಾಡಿಕೊಳ್ಳುವ ತನಕ ಬಿಡಬಾರದು. ಬಿಟ್ಟರೆ ಮತ್ತೆ ಆ ಸವಾಲನ್ನು ಎದುರಿಸಲು ಆಗುವುದಿಲ್ಲ. ಮೂರು ನಾಲ್ಕು ಬಾರಿ ಅಭ್ಯಾಸ ಮಾಡಿದರೆ ಎಂತಹ ಕಠಿಣ ಪಠ್ಯವೂ ಸುಲಭವಾಗುತ್ತದೆ. ಅಧ್ಯಾಪಕರ ಸೂಚನೆಯನ್ನು ಪಾಲನೆ ಮಾಡಬೇಕು. ಹಳೆಯ ಪ್ರಶ್ನೆಪತ್ರಿಕೆಗಳನ್ನು ಸಂಗ್ರಹಿಸಿ ಬಿಡಿಸಬೇಕು. ನಾವೇ ಪ್ರಶ್ನೆಗಳನ್ನು ಹಾಕಿಕೊಂಡು ಉತ್ತರಿಸುವುದನ್ನು ರೂಢಿಸಿಕೊಳ್ಳಬೇಕು.

ಮುಂದೆ ಐಪಿಎಸ್ ಮಾಡುವ ಕನಸು ಇದೆ.

ತಂದೆ ವೀರಬಸಪ್ಪ ಕೃಷಿಕ, ಅಮ್ಮ ವಿಶಾಲಮ್ಮ ಟೈಲರ್.



# ದಿನವೂ ಓದುವುದು ಮುಖ್ಯ



**ಅಂಕಿತಾ ಬಸಪ್ಪ ಕೊಣ್ಣೂರ**

**ಎಸ್‌ಎಸ್‌ಎಲ್‌ಸಿಯಲ್ಲಿ 625 ಅಂಕ ಗಳಿಸಿ (ಇಂಗ್ಲಿಷ್ ಮಾಧ್ಯಮ) ರಾಜ್ಯಕ್ಕೆ ಮೊದಲನೇ ಸ್ಥಾನ ಪಡೆದ ಏಕೈಕ ಹುಡುಗಿ.**

ಟಾಪರ್ ಆಗಬಹುದು ಎಂದು ನಿರೀಕ್ಷೆ ಮಾಡಿದ್ದೆ. ಆದರೆ, ಇಷ್ಟು ಮನ್ನಣೆ ಮತ್ತು ಮಾನ್ಯತೆ ಸಿಗುತ್ತದೆ ಎಂದು ನಿರೀಕ್ಷೆ ಮಾಡಿರಲಿಲ್ಲ.

ಈ ಹಿಂದೆ 625 ಅಂಕ ಪಡೆದವರನ್ನು ಸ್ಫೂರ್ತಿಯಾಗಿ ತೆಗೆದುಕೊಂಡು ಓದಿದೆ. ಫಲಿತಾಂಶ ಬರುವ ಮೊದಲು ನಾನು ಯಾರಿಗೂ ಗೊತ್ತಿರಲಿಲ್ಲ. ಫಲಿತಾಂಶ ಬಂದ ನಂತರ ಸಾಕಷ್ಟು ಪುರಸ್ಕಾರ, ಸನ್ಮಾನಗಳನ್ನು ಮೊದಲ ಬಾರಿಗೆ ಅನುಭವಿಸುತ್ತಿದ್ದೇನೆ. ನನಗೂ ಪ್ರಾಮುಖ್ಯತೆ ಎನ್ನುವುದು ಸಿಕ್ಕಿದೆ. ಬದುಕು ಬದಲಾಯಿತು ಎಂದೆನಿಸುತ್ತಿದೆ, ತುಂಬ ಖುಷಿ ಆಗಿದೆ.

ಓದಿನ ವೇಳಾಪಟ್ಟಿಯನ್ನು ಪ್ರತಿ ದಿನ ಪ್ರತಿ ವಿಷಯಕ್ಕೆ ಒಂದು ಗಂಟೆ ನಿಗದಿ ಮಾಡಿಕೊಂಡಿದ್ದೆ. ನಾನು ಓದುತ್ತಿದ್ದ ಅಧ್ಯಾಯವನ್ನು ಪೂರ್ಣಗೊಳಿಸುವ ತನಕ ನಿಲ್ಲಿಸುತ್ತಿರಲಿಲ್ಲ. ಆಗ ಸಮಯ ದೀರ್ಘವಾಗುತ್ತಿತ್ತು. ಟಾಪಿಕ್ ಆಧಾರದ ಮೇಲೆ ಓದುತ್ತಿದ್ದೆ.

ಮೊರಾರ್ಜಿ ಶಾಲೆಯ ನೋಟ್ಸ್ ಓದುತ್ತಿದ್ದೆ. 9ನೇ ತರಗತಿಯ ರಜೆಯಲ್ಲಿ ಧಾರವಾಡದ ಸೃಷ್ಟಿ ಅಕಾಡೆಮಿಯಲ್ಲಿ 2 ತಿಂಗಳ ತರಬೇತಿ ತೆಗೆದುಕೊಂಡಿದ್ದೆ. ಅವರೂ ನೋಟ್ಸ್ ಕೊಟ್ಟಿದ್ದರು. ಅದೆಲ್ಲಕ್ಕಿಂತ ಪಠ್ಯಪುಸ್ತಕಕ್ಕೆ ಪ್ರಾಶಸ್ತ್ಯ ಕೊಡುತ್ತಿದ್ದೆ. ನಾನು ಹಾಸ್ಟೆಲ್‌ನಲ್ಲಿ ಇದ್ದರೂ ಪೋಷಕರು ತುಂಬ ಪ್ರೋತ್ಸಾಹ ನೀಡುತ್ತಿದ್ದರು.

ನಾನು ಅಂತರಶಾಲೆಗಳ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದೆ. ಆ ಸ್ಪರ್ಧೆಗಳಿಗೆ ನನ್ನನ್ನು ಪೋಷಕರೇ ಕರೆದುಕೊಂಡು ಹೋಗುತ್ತಿದ್ದರು. ಉತ್ತಮ ಫಲಿತಾಂಶಕ್ಕೆ ಶಿಕ್ಷಕರ ಸಲಹೆಯನ್ನು ಪಾಲಿಸಬೇಕು. ಒತ್ತಡಕ್ಕೆ ಈಡಾಗಬಾರದು. ನಮ್ಮ ಕನಸು ಸಾಕಾರಗೊಳಿಸುತ್ತೇವೆ ಎಂಬ ನಂಬಿಕೆ ಇರಬೇಕು. ಒತ್ತಡ ಇದ್ದರೆ ಋಣಾತ್ಮಕತೆ ಹೆಚ್ಚಾಗುತ್ತದೆ. ಪ್ರತಿ ದಿನವೂ ಓದುವುದು ಅತಿಮುಖ್ಯ.

ಎಂಜಿನಿಯರಿಂಗ್ ಮಾಡಿ ಐಎಎಸ್ ಮಾಡಬೇಕು ಎನ್ನುವುದು ನನ್ನ ಕನಸು.

ಅಪ್ಪ ಬಸಪ್ಪ ಕೊಣ್ಣೂರ, ರೈತ. ಅಮ್ಮ ಗೀತಾ, ಗೃಹಿಣಿ.